ಸಂಬಂಧಪಟ್ಟ ಪ್ರಶ್ನೆಯಲ್ಲ. ಸರ್ಕಾರದವರೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ತೆಗೆದುಕೊಂಡು ಬಂದು ನಿಜವಾಗಿ ಉದ್ಯೋಗ ವಿನಿಮಯ ಕೇಂದ್ರ ಇದೆ ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕು. ಅಲ್ಲಿ ನೊಂದಾಯಿಸಿದ ಅಭ್ಯರ್ಥಿ ಅಲ್ಲಿಗೆ ಹೋಗುವುದಕ್ಕೆ ಬೇಜಾರಾಗುತ್ತಿದೆ. 10-15 ವರ್ಷಗಳಿಂದ ಒಂದೂ ಇಂಟರ್‌ವ್ಯೂ ಬರುತ್ತಿಲ್ಲ. ಇನ್ನು ಯಾವ ರೀತಿ ಚುರುಕುಗೊಳಿಸಿ ಎಂದು ಕೇಳಬೇಕು.

ಶ್ರೀ ಸಿ.ಎಸ್. ನಾಡಗೌಡ : ಈ ವಿಷಯವನ್ನು ಪರಿಶೀಲಿಸೋಣ.

ರಾಜ್ಯದಲ್ಲಿ ವಿವಿಧ ವರ್ಗದ ಕಾರ್ಮಿಕರಿಗೆ ಕನಿಷ್ಠ ವೇತನ

1310 - ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ), ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ವರ್ಗಗಳ ಕಾರ್ಮಿಕರಿಗೆ ಕನಿಷ್ಠವೇತನವನ್ನು ನಿಗದಿಪಡಿಸಿದ್ದು ಯಾವಾಗ? (ವಿಭಾಗವಾರು ಅಂಕಿ-ಅಂಶಗಳನ್ನು ಕೊಡುವುದು)

ಆ) ಈ ವೇತನವನ್ನು ಪರಿಷ್ಕರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಇ) ಇದ್ದಲ್ಲಿ, ಯಾವಾಗ ಮಾಡಲಾಗುವುದು;

ಈ) ಕನಿಷ್ಠ ವೇತನ ನಿಗದಿ ಮಾಡದೇ ಇರುವ ವಿಭಾಗಗಳು ಯಾವುವು?

ಶ್ರೀ ಸಿ.ಎಸ್.ನಾಡಗೌಡ(ಕಾರ್ಮಿಕ ರಾಜ್ಯ ಸಚಿವರು) :

ಅ) 36ಸೆಡ್ಯೂಲ್‌ಗಳಿಗೆ ಕನಿಷ್ಠ ವೇತನ ನಿಗಧಿ ಮಾಡಲಾಗಿದೆ.(ಪಟ್ಟಿ ಲಗತ್ತಿಸಲಾಗಿದೆ).

ಆ) ಹೌದು.

ಇ) ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 13 (ಪಟ್ಟಿ ಲಗತ್ತಿಸಲಾಗಿದೆ)

EMPLOYMENTS FOR WHICH MINIMUM WAGES HAS BEEN FIXED

Sl. No.	*Name of the Employment*	*Date of notification.*
	Employment in	
1.	Residential Hotels & Eating Houses.	14.2.86
2.	Tailoring	12.2.86
3.	Coffee Curing	27.3.86
4.	Film Industry	25.5.84
5.	Agarbathi	5.6..84
6.	Cotton Ginning & Pressing.	25.5.84
7.	Rice, Dhall & Flour Mills.	25.5.84
8.	Agriculture.	12.7.88
9.	Printing press.	25.5.84
10.	Ceramics, Stone Ware & Potteries works.	25.5.84
11.	Construction or maintenance of Road or Building Operations.	5.6.84

12.	Sericulture.	6.6.84
13.	Public Motor Transport.	24.5.84
14.	Stone breaking or stone crushing.	24.5.84
15.	Stone breaking or stone crushing Operations carried on in any Quarry.	25.5.84
16.	Tanneries and Leather manufacturing.	5.6.84
17.	Cardamom Malais & Cardamom Gardens.	5.6.84
18.	Plantations.	5.6.84
19.	Khandasari Sugar Factories.	25.5.84.
20.	Toddy tapping.	25.5.84
21.	Carpentry Industry and Saw mill Industry.	9.11.84
22.	Cashew Industry.	23.11.83
23.	Engineering Industry.	18.2.87
24.	Tile Industry.	11.3.87
25.	Tubacco Industry (including Beedi)	25.7.86
26.	Foundry with or without machine shafts.	28.3.79
27.	Automobile Engineering (includinng servicing and repairing Work)	30.11.84
28.	Handloom and Powerloom .	22.11.79
29.	Oil Mill.	8.5.78
30.	Hospitals.	26.10.87
31.	Clubs.	26.10.87
32.	Shops and Commercial Establishments.	19.8.87
33.	Local Authority.	30.1.84
34.	Silk	19.1.67
35.	Confectionery.	26.10.87
36.	Bakery.	26.10.87

NAMES OF THE SCHEDULED EMPLOYMENT FOR WHICH FIXATION OF MINIMUM WAGES HAS NOT BEEN DONE

1.	Regulated Markets & Mandies and Bazars.	Not fixed.
2.	Wollen & Carpet Marketing or Shawl Weaving Establishments	Not fixed.
3.	Metal Rolling & Re-rolling Industry (Ferrous)	Not fixed.
4.	Metal Rolling & Re-rolling Industry (Non-Ferrous)	Not fixed
5.	Biscuits	Not fixed
6.	Mini Cement Plant.	Not fixed.

7.	Rubber Products (Foam & Coir Rubberised products)	Not fixed.
8.	Brick Manufacturers.	Draft Proposal published on 19.3.1988.
9.	Petrol & Diesel Oil Pumps	Draft Proposal published on 19.3.1988.
10.	Laundries.	Draft Proposal published on 22.2.1988
11.	Educational Institution.	Draft proposal published on 19.3.1988.
12.	Forestry & Timbering operation	Draft proposal published on 13.4.1988.
13.	Handloom/ Powerloom (cotton) Industry.	Draft proposal issued on 23.9.88

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಈ ಕೂಲಿ ಕಾರ್ಮಿಕರ ಕನಿಷ್ಟ ವೇತನ 1988ರ ನಂತರ ಒಬ್ಬರಿಗೂ ಸಹ ಫಿಕ್ಸ್ ಆಗಿಲ್ಲ. ಕಳೆದ 2ವರ್ಷಗಳಲ್ಲಿ ಒಬ್ಬರಿಗೂ ಸಹ ಕನಷ್ಟವೇತನ ಫಿಕ್ಸ್ ಆಗಿಲ್ಲ ಇದು ತಾವು ಕೊಟ್ಟಿರತಕ್ಕಂತಹ ಉತ್ತರದಿಂದ ಸ್ಪಷ್ಟವಾಗಿದೆ. ಈಗ ಫ್ರೈಸ್ ರೈಸಸ್ ಇಂಡೆಕ್ಸ್ ಎಲ್ಲಾ ಜಾಸ್ತಿಯಾಗಿ ರಿವಿಷನ್ ಮಾಡತಕ್ಕಂತಹ ಪ್ರಶ್ನೆ ಬರುತ್ತದೆ. ಅದು ಸಹಿತ ಬರಲಿಲ್ಲ. ತಾವು ಹೇಳಿದ ಹಾಗೆ 13 ಷೆಡ್ಯೂಲ್‌ಗಳಲ್ಲಿ ಇನ್ನೂ ಅದು ಫಿಕ್ಸ್ ಆಗಿಲ್ಲ. ಎಲ್ಲಿ ವರ್ಕ್ಸ್ ಎಕ್ಸ್‌ಪ್ಲಾಯಟೇಷನ್ ಜಾಸ್ತಿ ಇದೆ ಅಲ್ಲಿ ಫಿಕ್ಸ್ ಮಾಡಲಿಕ್ಕೆ ಆಗಿಲ್ಲ. 1988ರಲ್ಲಿ ನೋಟಿಫಿಕೇಷನ್ ಆಗಿರತಕ್ಕಂಥಾದ್ದನ್ನು ಫೈನಲ್ ನೋಟಿಫಿಕೇಷನ್ ಮಾಡಿ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈ ಡಿಲೇಗೆ ಕಾರಣವೇನು? ಮತ್ತು ಯಾವಾಗ ಮಾಡುತ್ತೀರಿ ಎನ್ನುವುದನ್ನು ತಾವು ನಿರ್ದಿಷ್ಟವಾಗಿ ತಿಳಿಸಬೇಕು.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ವಿಳಂಬವಾಗಿರುವುದಕ್ಕೆ ಕಾರಣವೆಂದರೆ, ಮುಖ್ಯವಾಗಿ ಮಧ್ಯದಲ್ಲಿ ಒಂದು ಸರ್ಕಾರ ಬಂದಿದ್ದು, ಇದು ತಮಗೂ ಗೊತ್ತಿದೆ. ಆಗ ಮಿನಿಮಮ್ ವೇಜಸ್ ಅಡ್‌ವೈಸರಿ ಬೋರ್ಡ್‌ನ್ನು ಡಿಸಾಲ್ವ್ ಮಾಡಿದರು. It is-a statutory body. ನಾವು ಬಂದ ಮೇಲೆ ಅದನ್ನು ಪುನಃ ರಿಫಾರ್ಮ್ ಮಾಡಬೇಕಾಯಿತು. They have fixed at certain interwals.

ಸ್ಟಾಚ್ಯುಟರಿ ಬೋರ್ಡ್ ಮಾಡಿದ್ದೇವೆ, ಅದು ಏನು ಡಿಸಿಷನ್ ತೆಗೆದುಕೊಳ್ಳುತ್ತದೆ ಆಮೇಲೆ ಅದನ್ನು ಪುನಃ ವೆರಿಫೈ ಮಾಡಿ ಮತ್ತೆ ನಾವು ನೋಟಿಫಿಕೇಷನ್ ಇಶ್ಯೂ ಮಾಡಬೇಕಾಗುತ್ತದೆ. ಈಗ ಅಗ್ರಿಕಲ್ಚರ್‌ನಲ್ಲಿ ಯಾವುದನ್ನೂ ಮಾಡಿಲ್ಲವೆಂದು ಹೇಳಿದರಿ.ಈ ಅಗ್ರಿಕಲ್ಚರ್ ಎಂಪ್ಲಾಯೀಸ್ ವಿಚಾರದಲ್ಲಿ ನಾವು ಫೈನಲ್ ನೋಟಿಫಿಕೇಷನ್ ಸಧ್ಯದಲ್ಲೇ ಇಶ್ಯು ಮಾಡುವಂಥ ಹಂತದಲ್ಲಿದೆ. ಅದು ಕನಿಷ್ಟ ನಾಲ್ಕು ವರ್ಷದಿಂದ ಆಗಿರಲಿಲ್ಲ. ಎಲ್ಲವನ್ನು ಆದಷ್ಟು ಶೀಘ್ರಗತಿಯಲ್ಲಿ ಮಾಡುತ್ತೇವೆಂದು ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಕೊನೆಯ ಪಕ್ಷ ಬೋರ್ಡ್ ಡಿಕಾನ್‌ಸ್ಟಿಟ್ಯೂಟ್ ಮಾಡಿದ್ದೀರ?

ಶ್ರೀ ಸಿ.ಎಸ್. ನಾಡಗೌಡ : ಆಗಿದೆ, ಈಗಾಗಲೆ ಫಂಕ್ಷನ್ ಆಗುತ್ತಿದೆ.